# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 921 |
| ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 28.09.2020 |
| ಉತ್ತರಿಸುವವರು | : | ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು; ಮತ್ತು ದಟ್ಟ ಅರಣ್ಯ ಪ್ರದೇಶಗಳು ಎಲ್ಲೆಲ್ಲಿವೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಬೀದರ್ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ 12563.18 ಹೆಕ್ಟೇರ್ ಇರುತ್ತದೆ. ವಿವರಗಳನ್ನು <u>ಅನುಬಂಧ</u> ದಲ್ಲಿ ಒದಗಿಸಿದೆ. |
| ಆ) | ಸಾಮಾಜಿಕ ಅರಣ್ಯ (Social Forestry) ವಿಸ್ತೀರ್ಣ ಎಷ್ಟಿದೆ; ಮತ್ತು ಇದರಿಂದ ಸಾಮಾಜಿಕವಾಗಿ ಏನು ಪ್ರಯೋಜನಗಳಿವೆ; ಸರ್ಕಾರಕ್ಕೆ ಬರುವ ಆದಾಯವೆಷ್ಟು; ಎಷ್ಟು ಶ್ರೀಗಂಧದ ಮರಗಳಿವೆ; ಹೆಚ್ಚಿಗೆ ಎಲ್ಲಿ ಕಂಡು ಬರುತ್ತವೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಸಾಮಾಜಿಕ ಅರಣ್ಯ ಎಂಬುದಾಗಿ ಘೋಷಿತ ಪ್ರದೇಶ ಇರುವುದಿಲ್ಲ. ಅರಣ್ಯೇತರ ಪ್ರದೇಶಗಳಲ್ಲಿ ಅಂದರೆ ಸಂಘ ಸಂಸ್ಥೆಗಳ ಜಮೀನುಗಳಲ್ಲಿ, ಕೆರೆ ಬಂದ್ ಪ್ರದೇಶಗಳಲ್ಲಿ, ರೈಲ್ವೆ ಬದುಗಳಲ್ಲಿ, ಶಾಲಾ ಕಾಲೇಜುಗಳ ಆವರಣ ಇತ್ಯಾದಿ ಸ್ಥಳಗಳಲ್ಲಿ ನೆಡುತೋಪುಗಳನ್ನು ಬೆಳೆಸಿ ಹಸರೀಕರಣ ಮಾಡಲಾಗುತ್ತಿದೆ. ಈ ರೀತಿ ಬೆಳೆಸಿದ ನೆಡುತೋಪುಗಳ ಒಟ್ಟು ವಿಸ್ತೀರ್ಣ 234825.93 ಹೆಕ್ಟೇರ್ ಇರುತ್ತದೆ.<br><br>**<u>ಇದರಿಂದಾಗುವ ಸಾಮಾಜಿಕ ಪ್ರಯೋಜನಗಳು</u>**<br><br>1. ಸರ್ಕಾರಿ ಮತ್ತು ಇತರೆ ಅರಣ್ಯೇತರ ಪ್ರದೇಶಗಳಲ್ಲಿ ಹಸರೀಕರಣ ಹೆಚ್ಚಿಸುವುದು.<br>2. ರೈತರ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಭದ್ರತೆ.<br>3. ಪರಿಸರಕ್ಕೆ ಅಮೋಘವಾದ ಕೊಡುಗೆ.<br>4. ಪ್ರಾಣಿ ಪಕ್ಷಿಗಳಿಗೆ ಆಸರೆ ಮತ್ತು ಆಹಾರ ದೊರಕುವುದು.<br>5. ಮಣ್ಣು ಸವಕಳಿಕೆ ತಡೆಯುವುದು.<br>6. ನೀರು ಸಂರಕ್ಷಣೆ ಮತ್ತು ಮಣ್ಣಿನ ತೇವಾಂಶ ಹೆಚ್ಚಿಸಿದಂತಾಗಿ ಕೃಷಿ/ ತೋಟಗಾರಿಕೆ ಬೆಳೆಗಳಿಗೆ ಹೆಚ್ಚು ಫಸಲು ಬರಲು ಸಹಕಾರಿಯಾಗುತ್ತದೆ.<br>7. ಗುಡಿ ಕೈಗಾರಿಕೆಗಾರರಿಗೆ ಜೀವನೋಪಾಯಕ್ಕೆ ತಳಪಾಯ.<br>8. ದೇಶದ ಆರ್ಥಿಕತೆಗೆ ಅನುಕೂಲ(ವಿದೇಶಿ ವಿನಿಮಯದ ಮುಂಖಾಂತರ)<br>9. ಔಷಧೀಯ ಮತ್ತು ಸುಗಂಧ ಭರಿತವಾದ ತೈಲಕ್ಕೆ ಬೇಡಿಕೆ.<br>10. ಪಾರಂಪರಿಕೆ ಶ್ರೀಗಂಧ ನಾಡನ್ನು ಮರು ನಿರ್ಮಾಣ ಮಾಡುವುದು.<br><br>**<u>ಸರ್ಕಾರಕ್ಕೆ ಬರುವ ಆದಾಯದ ವಿವರಗಳು</u>**<br>ಸರ್ಕಾರದ ಜಮೀನುಗಳಲ್ಲಿ ಬೆಳೆದ ಗಿಡಗಳಿಗೆ ಅದರ ಗುಣಮಟ್ಟದ ಪ್ರಕಾರ ಈಗಿನ ದರದಲ್ಲಿ ಪ್ರತಿ ಕೆ.ಜಿ.ಗೆ ರೂ.6000/– ದೊರೆಯುವುದು ಹಾಗೂ ಮುಂದಿನ ದಿನಗಳಲ್ಲಿ ವಿದೇಶಿ ಬೇಡಿಕೆ ಹೆಚ್ಚಾಗುವುದರಿಂದ ಹೆಚ್ಚಿನ ಆರ್ಥಿಕ ಲಾಭ ಸರ್ಕಾರಕ್ಕೆ ಆಗುವ ಸಂಭವವಿದೆ.<br>ರೈತರುಗಳ ಜಮೀನುಗಳಲ್ಲಿ ಬೆಳೆದ ಗಿಡಗಳಿಂದ ಬಂದ ಗುಣಮಟ್ಟದ ಶ್ರೀಗಂಧಕ್ಕೆ ನೂತನ ಕಾಯ್ದೆಯಂತೆ, ಸರ್ಕಾರಕ್ಕೆ ನಿರ್ವಹಣೆ ಮತ್ತು ಬೇರ್ಪಡಿಸುವ(ವಿಂಗಡಿಸುವ) ಮೊತ್ತ ಮತ್ತು ತೆರಿಗೆಗಳು ಸರ್ಕಾರಕ್ಕೆ ಬಂದು, ಬಾಕಿ ಎಲ್ಲಾ ಮೊತ್ತವು ರೈತರಿಗೆ ದೊರಕುವುದು.<br><br>**<u>ಶ್ರೀಗಂಧದ ಮರಗಳ ವಿವರ</u>**<br>ರೈತರುಗಳು ಸ್ವ ಇಚ್ಛೆಯಿಂದ ಅವರ ಜಮೀನುಗಳಲ್ಲಿ ಸ್ವತಃ ಹಾಗೂ ಕೃಷಿ ಅರಣ್ಯ ಯೋಜನೆಗಳಡಿ ಶ್ರೀಗಂಧವನ್ನು ಬೆಳೆಸುತ್ತಿದ್ದಾರೆ. ಸಮೀಕ್ಷೆ ಮಾಡುವುದರ ಮುಖಾಂತರ ಅರಣ್ಯೇತರ ಮತ್ತು ರೈತರ ಜಮೀನುಗಳಲ್ಲಿನ ಮರಗಳ ಪ್ರಮಾಣ ನಿರ್ಧರಿಸಬೇಕಾಗುತ್ತದೆ. |

ಶ್ರೀಗಂಧ ಬೆಳೆಸಿರುವ ತಾಲ್ಲೂಕುಗಳ ವಿವರ ಈ ಕೆಳಗಿನಂತಿವೆ:

| ಜಿಲ್ಲೆ | ತಾಲ್ಲೂಕು |
|---|---|
| ಕೋಲಾರ | ಕೋಲಾರ/ಮಾಲೂರು/ಶ್ರೀನಿವಾಸಪುರ/ಬಂಗಾರಪೇಟೆ/ ಮುಳಬಾಗಿಲು |
| ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ/ಹೊಸಕೋಟೆ/ನೆಲಮಂಗಲ |
| ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ/ಬಾಗೇಪಲ್ಲಿ/ಚಿಂತಾಮಣಿ/ ಗೌರಿಬಿದನೂರು/ಗುಡಿಬಂಡೆ/ಶಿಡ್ಲಘಟ್ಟ |
| ರಾಮನಗರ | ರಾಮನಗರ/ಚನ್ನಪಟ್ಟಣ/ಕನಕಪುರ/ಮಾಗಡಿ |
| ಮಂಡ್ಯ | ಕೆ.ಆರ್.ಪೇಟೆ/ಮದ್ದೂರು/ಮಳವಳ್ಳಿ/ಮಂಡ್ಯ/ನಾಗಮಂಗಲ/ ಪಾಂಡವಪುರ/ಶ್ರೀರಂಗಪಟ್ಟಣ |
| ಮೈಸೂರು | ಮೈಸೂರು/ಹೆಚ್.ಡಿ.ಕೋಟೆ/ಹುಣಸೂರು/ಕೆ.ಆರ್.ನಗರ/ ನಂಜನಗೂಡು/ಪಿರಿಯಾಪಟ್ಟಣ/ಟಿ.ಎನ್.ಪುರ |
| ತುಮಕೂರು | ಚಿಕ್ಕನಾಯಕನಹಳ್ಳಿ/ಗುಬ್ಬಿ/ಕೊರಟಗೆರೆ/ಕುಣಿಗಲ್/ಮಧುಗಿರಿ/ ಪಾವಗಡ/ಶಿರಾ/ತಿಪಟೂರು/ತುಮಕೂರು/ ತುರುವೇಕೆರೆ |
| ಕೊಪ್ಪಳ | ಕೊಪ್ಪಳ/ಕುಷ್ಟಗಿ/ಗಂಗಾವತಿ/ಯಲಬುರ್ಗ |
| ಬಳ್ಳಾರಿ | ಬಳ್ಳಾರಿ/ಹೊಸಪೇಟೆ/ಹರಪ್ಪನಹಳ್ಳಿ/ಹೂವಿನಹಡಗಲಿ |
| ವಿಜಯಪುರ | ವಿಜಯಪುರ/ಇಂಡಿ/ಸಿಂದಗಿ/ಬಸವನಬಾಗೇವಾಡಿ/ ಮುದ್ದೇಬಿಹಾಳ್ |
| ಚಿತ್ರದುರ್ಗ | ಚಳ್ಳಕೆರೆ/ಚಿತ್ರದುರ್ಗ/ಹಿರಿಯೂರು/ಹೊಳಲ್ಕೆರೆ/ಹೊಸದುರ್ಗ/ ಮೊಳಕಾಲ್ಮೂರು |
| ದಾವಣಗೆರೆ | ದಾವಣಗೆರೆ/ಜಗಳೂರು/ಚನ್ನಗಿರಿ/ಹೊನ್ನಾಳಿ |
| ಚಿಕ್ಕಮಗಳೂರು | ಕಡೂರು/ತರೀಕೆರೆ |
| ಹಾವೇರಿ | ಹೀರೆಕೆರೂರು/ರಾಣಿಬೆನ್ನೂರು/ಶಿಗ್ಗಾಂವ್ |
| ಹಾಸನ | ಹಾಸನ/ಬೇಲೂರು/ಅರಕಲಗೂಡು/ಅರಸೀಕೆರೆ/ ಹೊಳೇನರಸೀಪುರ/ಚನ್ನರಾಯಪಟ್ಟಣ |
| ಶಿವಮೊಗ್ಗ | ಶಿವಮೊಗ್ಗ/ಸಾಗರ/ಸೊರಬ |
| ಬೀದರ್ | ಔರಾದ್/ಬಸವಕಲ್ಯಾಣ/ಬಾಲ್ಕಿ/ಬೀದರ್ |
| ಕಲಬುರಗಿ | ಅಫ್‌ಜಲ್‌ಪುರ/ಅಳಂದಾ/ಜೇವರ್ಗಿ/ |
| ಗದಗ | ಗದಗ/ಮುಂಡರಗಿ/ರೋಣ/ಶಿರಹಟ್ಟಿ/ನರಗುಂದ |
| ರಾಯಚೂರು | ರಾಯಚೂರು/ಮಾನ್ವಿ/ಡಿಯೋದುರ್ಗ/ಲಿಂಗಸಗೂರು/ ಸಿಂದನೂರು |
| ಯಾದಗಿರಿ | ಯಾದಗಿರಿ/ಶಹಪುರ/ಶೋರಪುರ |
| ಬೆಳಗಾವಿ | ಅಥಣಿ/ಬೈಲಹೊಂಗಲ//ಗೋಕಾಕ್/ ರಾಮದುರ್ಗ/ಸವದತ್ತಿ |
| ಧಾರವಾಡ | ಕಲಘಟ್ಟಗಿ/ಕುಂದಗೋಳ್/ ನವಲಗುಂದ |
| ಬಾಗಲಕೋಟೆ | ಬಾಗಲಕೋಟೆ/ಬಾದಾಮಿ/ಹುನಗುಂದ/ಬೈಲಹೊಂಗಲ/ ಜಮಖಂಡಿ/ಮುದ್ದೋಳ್ |

| | | |
|---|---|---|
| ಇ) | ಶ್ರೀಗಂಧದ ಮರಗಳ ಮೇಲೆ ಹಿಂದಿನ ಸರ್ಕಾರ ಯಾವ ನಿರ್ಬಂಧಗಳನ್ನು ಹಾಕಿತ್ತು ಮತ್ತು ಈಗಲೂ ಈ ನಿರ್ಬಂಧಗಳು ಹಾಗೆಯೇ ಜಾರಿಯಲ್ಲಿವೆಯೇ; ಇಲ್ಲವಾದರೆ ಯಾವ ಬದಲಾವಣೆಗಳಾಗಿವೆ; | ಶ್ರೀಗಂಧದ ಮರಗಳ ಮೇಲೆ ಹಿಂದಿನ ಸರ್ಕಾರ ಯಾವುದೇ ನಿರ್ಬಂಧಗಳನ್ನು ವಿಧಿಸಿರುವುದಿಲ್ಲ. |
| ಈ) | ಶ್ರೀಗಂಧದ ಮರಗಳಿಂದ ಉತ್ಪಾದನೆ ಪಾಲು ಸರ್ಕಾರಕ್ಕೆ ಎಷ್ಟು ಮತ್ತು ಬೆಳೆದವರಿಗೆ ಎಷ್ಟು? (ಸ್ಪಷ್ಟ ಮಾಹಿತಿ ನೀಡುವುದು). | ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108 **(5), 108(6)**ರನ್ವಯ ಶ್ರೀಗಂಧ ಮರಗಳ ಮಾಲೀಕರು ಶ್ರೀಗಂಧ ಮರಗಳನ್ನು ಸರ್ಕಾರಿ ಶ್ರೀಗಂಧದ ಕೋಠಿಗೆ ನೀಡಿದಾಗ, ಶ್ರೀಗಂಧ ಮರವನ್ನು ವಿವಿಧ ವರ್ಗಗಳಾಗಿ ಪರಿವರ್ತಿಸಿದ ನಂತರ ಪ್ರತಿಯೊಂದು ವರ್ಗಕ್ಕೆ ಸರ್ಕಾರವು ನಿಗಧಿಪಡಿಸಿರುವ ದರಗಳನ್ವಯ ಅದರ ಒಟ್ಟು ಮೌಲ್ಯವನ್ನು ನಿಗದಿಪಡಿಸಲಾಗುವುದು. |

| | | |
|---|---|---|
| | | ಹೀಗೆ ನಿಗದಿಪಡಿಸಿದ ವಿವಿಧ ವರ್ಗಗಳ ಶ್ರೀಗಂಧದ ಒಟ್ಟು ಮೌಲ್ಯದಲ್ಲಿ, ಸರ್ಕಾರದ ಪಾಲು ಶೇಕಡ 10 ಮೇಲ್ವಿಚಾರಣೆ ವೆಚ್ಚ, ಶ್ರೀಗಂಧ ಕೋಠಿಯಲ್ಲಿ ಪರಿವರ್ತನೆಗೆ ತಗಲುವ ವೆಚ್ಚ ಮತ್ತು ಒಂದು ವೇಳೆ ಇಲಾಖಾ ವತಿಯಿಂದ ಶ್ರೀಗಂಧ ಮರಗಳನ್ನು ರೈತರ ಜಮೀನಿನಿಂದ ಡಿಪೋಗೆ ಸಾಗಾಣಿಕೆ ಮಾಡಿದಲ್ಲಿ ಅದಕ್ಕೆ ತಗಲುವ ಸಾಗಾಣಿಕೆ ವೆಚ್ಚವನ್ನು ಕಡಿದು, ಉಳಿದ ಮೌಲ್ಯವನ್ನು ಶ್ರೀಗಂಧ ಮರಗಳ ಮಾಲೀಕರಿಗೆ ಪಾವತಿಸಲಾಗುತ್ತದೆ. |

ಸಂಖ್ಯೆ: ಅಪಜೀ 108 ಎಫ್‌ಎಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

# ಅನುಬಂಧ

## Details of Notified Forests Area In Bidar District

| Sl.No. | District | Taluk | Extent (In Ha.) | | | | | Total |
|---|---|---|---|---|---|---|---|---|
| | | | RF | VF | PF | UF | Private Forests | |
| 1 | Bidar | Aurad | 180.25 | 0 | 0 | 818.53 | 0 | 998.78 |
| | | Basavakalyan | 489.28 | 0 | 0 | 879.22 | 0 | 1,368.50 |
| | | Bhalki | | 0 | 38.85066775 | 628.52 | 0 | 667.37 |
| | | Bidar | 2349.87 | 0 | 208.4581141 | 2179.68 | 0 | 4,738.01 |
| | | Humanabad | 1833.35 | 0 | 1571.853501 | 1385.32 | 0 | 4,790.52 |
| **Total** | | | **4852.75** | **0** | **1819.162282** | **5891.27** | **0** | **12,563.18** |